ಕರ್ನಾಟಕ ವಿಧಾನ ಸಭೆ ನಡವಳಿಗಳು

ಗುರುವಾರ 2ನೇ ಆಗಸ್ಟ್ 2007

10–30 ಎ.ಎಂ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಸದನ ನಾಳೆ ಮುಂದುವರೆಯುತ್ತದೋ, ಇಲ್ಲವೋ, ಇವತ್ತು ಕೊನೆ ಮಾಡುತ್ತೀರಾ ಎನ್ನುವುದನ್ನು ತಾವು ಹೇಳಬೇಕು.

ಅಧ್ಯಕ್ಷರು: ಒಂದು ಪ್ರಕಟಣೆ ಇದೆ.

1. ಪ್ರಕಟಣೆ

ವಿಷಯ : ದಿನಾಂಕ 01–08–07ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿ.

ದಿನಾಂಕ 01–08–2007ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯವನ್ನು ಕೈಗೊಳ್ಳಲಾಗಿದೆ. "ಪ್ರಧಾನ ಮಂತ್ರಿಯವರು ದಿನಾಂಕ 03–08–2007ರಂದು ಬೆಂಗಳೂರಿಗೆ ಆಗಮಿಸಿ, ವಿಧಾನಸೌಧದಲ್ಲಿನ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವ ಪ್ರಸಕ್ತ ಅಧಿವೇಶನವನ್ನು ಈ ದಿವಸ, ದಿನಾಂಕ 2ನೇ ಆಗಸ್ಟ್ 2007ರ ಗುರುವಾರದಂದು ಮುಕ್ತಾಯಗೊಳಿಸಲು ತೀರ್ಮಾನಿಸಲಾಗಿದೆ".

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ತಮ್ಮ ತೀರ್ಮಾನದ ಬಗ್ಗೆ ನನಗೆ ಬಹಳ ನೋವಾಗುತ್ತಿದೆ. ಈ ಸದನ ಸರ್ವೋಚ್ಚ ಮತ್ತು ಇದಕ್ಕೆ ಸಾರ್ವಭೌಮತೆ ಇರತಕ್ಕಂಥಾದ್ದು. ಪ್ರಧಾನ ಮಂತ್ರಿಯವರು ಬರುತ್ತಾರೆ ಎಂದು ಸದನವನ್ನು ಮುಂದೂಡತಕ್ಕಂಥ ವಿಚಾರ ಸರಿಯಾದ ಕ್ರಮವಲ್ಲ. ತಾವು ಏಕೆ ಇದಕ್ಕೆ ಒಪ್ಪಿದರೋ ಗೊತ್ತಿಲ್ಲ.

ಅಧ್ಯಕ್ಷರು: ನಿನ್ನೆ ನಡೆದ ಸಲಹಾ ಸಮಿತಿಯ ಸಭೆಗೆ ತಮ್ಮನ್ನೂ ಆಹ್ವಾನ ಮಾಡಿದ್ದೆವು. ತಾವು ಅಲ್ಲಿ ಬಂದು ತಮ್ಮ ಸಲಹೆಗಳನ್ನು ಕೊಡಬೇಕಾಗಿತ್ತು. ಆದ್ದರಿಂದ, ಈಗ ನೀವು ಇಲ್ಲಿ ಬಂದು ಸುಮ್ಮನೆ ಈ ರೀತಿ ಹೇಳುವುದು ಹಿರಿಯ ಸದಸ್ಯರಾದ ತಮಗೆ ಸರಿಯಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಸಲಹಾ ಸಮಿತಿಗೆ ಬರುವುದನ್ನೇನೂ ತಾವು ನಮಗೆ ಉಳಿಸಿಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸಲಹಾ ಸಮಿತಿಗೆ ನಮ್ಮನ್ನು ಬರುವ ರೀತಿಯಲ್ಲಿ ಮಾಡಿಲ್ಲ.

(ಗೊಂದಲ)

ಅಧ್ಯಕ್ಷರು: ನೀವು ಸುಮ್ಮನೆ ಈ ರೀತಿ ಚರ್ಚೆ ಮಾಡಿಕೊಂಡು, ರಾಜಕಾರಣ ಮಾಡಿಕೊಂಡು ಕುಳಿತರೆ ಆಗುವುದಿಲ್ಲ. ಇದನ್ನು ಬೇರೆಯವರು ಕೇಳಿದ್ದರೆ ಅದು ಒಂದು ರೀತಿಯಾಗುತ್ತಿತ್ತು. ಆದರೆ, ತಾವು ಸಲಹಾ ಸಮಿತಿಯ ಸದಸ್ಯರಾಗಿದ್ದೀರಿ. ತಮಗೆ ಆಹ್ವಾನವಿತ್ತು. ಅಲ್ಲಿ ಬಂದು ಸಲಹೆ ಕೊಡುವುದನ್ನು ಬಿಟ್ಟು ಇಲ್ಲಿ ಈ ರೀತಿ ಹೇಳುವುದರಲ್ಲಿ ಏನೂ ಅರ್ಥವಿಲ್ಲ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಲ್ಲಿಗೆ ಬರುವ ದೃಷ್ಟಿಯಲ್ಲಿ ನೀವು ನಮ್ಮನ್ನು ಕರೆಯಲಿಲ್ಲ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ನೀವು ಸದನವನ್ನು ಯಾವಾಗ ಬೇಕೆಂದರೆ ಆಗ ಕ್ಲೋಸ್ ಮಾಡಿಕೊಂಡು ಹೋಗುತ್ತೇವೆ ಎಂದರೆ ಸುಮ್ಮನಿರಬೇಕೇ?

ಶ್ರೀ ವಾಟಾಳ್ ನಾಗರಾಜ್: ಈ ಸದನವನ್ನು ಕಾಲಕಸ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಇದು ಆಗುವುದಿಲ್ಲ. ಈ ಸದನವನ್ನು ಮೂಲೆಗುಂಪು ಮಾಡುವುದಕ್ಕಾಗುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಈ ಸದನವನ್ನು ಕಡೆಗಣಿಸುವುದಕ್ಕಾಗುವುದಿಲ್ಲ. ಪ್ರಧಾನ ಮಂತ್ರಿಯವರು ರಾಜಭವನಕ್ಕೆ ಹೋಗಲಿ, ಬೇರೆ ಎಲ್ಲಿಗೆ ಬೇಕಾದರೂ ಹೋಗಲಿ.

(ಗೊಂದಲ)

ಅಧ್ಯಕ್ಷರು: ಶಂಕರಮೂರ್ತಿಯವರೇ ನೀವು ಪ್ರಸ್ತಾವವನ್ನು ಮಂಡಿಸಿ.

2. ವಿಧಾನ ಸಭೆಯ ವಿವಿಧ ಸಮಿತಿಗಳಿಗೆ ಚುನಾವಣೆ ಪ್ರಸ್ತಾವ

ಶ್ರೀ ಡಿ.ಹೆಚ್. ಶಂಕರಮೂರ್ತಿ (ಮಾನ್ಯ ಉನ್ನತ ಶಿಕ್ಷಣ ಸಚಿವರು) (ಶ್ರೀ ಎಂ.ಪಿ. ಪ್ರಕಾಶ್, ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಈಗಾಗಲೇ ದಿನಾಂಕ 25ನೇ ಜುಲೈ 2007ರಂದು ವಿಧಾನಸಭೆಯ ವಿವಿಧ ಸಮಿತಿಗಳನ್ನು ರಚಿಸಲು ಚುನಾವಣಾ ಪ್ರಸ್ತಾವನೆಯನ್ನು ಮಂಡಿಸಿದ್ದು, ಚುನಾವಣಾ ಕಾರ್ಯಕ್ರಮಗಳ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಅಲ್ಲದೆ ದಿನಾಂಕ 1ನೇ ಆಗಸ್ಟ್ 2007ರಂದು ಕನ್ನಡ ವಿಶ್ವವಿದ್ಯಾಲಯದ ಆಡಳಿತ ಮಂಡಳಿಗೆ ಒಬ್ಬ ವಿಧಾನಸಭಾ ಸದಸ್ಯರನ್ನು ಚುನಾಯಿಸಲು ಪ್ರಸ್ತಾವವನ್ನು ಮಂಡಿಸಲಾಗಿದೆ.

ಅದರಂತೆ, ವಿಧಾನಸಭೆಯ ವಿವಿಧ ಸಮಿತಿಗಳಿಗೆ ಕನ್ನಡ ವಿಶ್ವವಿದ್ಯಾಲಯವು ಸೇರಿದಂತೆ, ಮಾನ್ಯ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರವರಿಗೆ ಅಧಿಕಾರ ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಮಾನ್ಯ ಸಚಿವರು ಮಂಡಿಸಿದ ಪ್ರಸ್ತಾವಕ್ಕೆ ಸದನದ ಸಹಮತಿ ಇದೆಯೆಂದು ಭಾವಿಸಲಾಗಿದೆ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ವಿಷಯ : ಪ್ರಧಾನ ಮಂತ್ರಿಯವರು ದಿನಾಂಕ 3-8-2007 ರಂದು ರಾಜ್ಯಕ್ಕೆ ನೀಡುವ ಭೇಟಿಯಿಂದಾಗಿ ಸದನವನ್ನು ಮುಂದೂಡಿರುವ ಬಗ್ಗೆ.

(ಗೊಂದಲ)